

ಎಂದು ರಂಟೂ ಪ್ರವೀಣ ಬಂದರು. ನಾವು ಮುಖ್ಯ ರಸ್ತೆ ದಾಟಿ, ಒಂದು ಟೀ ಎಸ್ಟೇಟಿನ ಇಳಿಜಾರಿನಲ್ಲಿ ನಡೆಯತೊಡಗಿದೆವು. ಡಾರ್ಜಲಿಂಗ್ ವುಡ್ ಪೆಕರ್ ಹೇಗಿದೆಯೋ? ಏನೋ? ಫೋಟೊಗೆ ಸಿಗುತ್ತೋ ಇಲ್ಲವೋ? ಅದನ್ನು ನೋಡುವಾಗ ಆಗುವ ಸಂತೋಷ ಎಷ್ಟು ಕೆ.ಜಿ. ತೂಗಬಹುದು ಎಂದೆಲ್ಲಾ ಲೆಕ್ಕಾಚಾರ ಹಾಕುತ್ತಾ ಹೋದೆವು. ನಮ್ಮ ನಡಿಗೆಯಲ್ಲಿ ಕಾತರ, ಅವಸರ ಎಲ್ಲವೂ ಇದ್ದವು.

ರಸ್ತೆಯ ವಿರುದ್ಧ ದಿಕ್ಕಿಗೆ ಇದ್ದ ಒಂದಿಷ್ಟು ಎತ್ತರದ ಸ್ಥಳಕ್ಕೆ ಕರೆತಂದು ನಿಲ್ಲಿಸಿ, 'ಅಗೋ ನೋಡಿ ಅಲ್ಲಿದೆ' ಎಂದು ರಂಟೂ ತೋರಿಸಿದ. ನನಗಂತೂ ಅಲ್ಲಿ ಏನೂ ಕಾಣಲಿಲ್ಲ. ಮುಂದೆ ಒಣಗಿದ್ದ ಮರವಿತ್ತು. ಅದರ ಮೇಲೆ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಬೆಳೆಯುವ ಹಸಿರು ಪಾಚಿ ಹುಲ್ಲು ಬೆಳೆದಿತ್ತು. ಟ್ರೈಪ್ಯಾಡಿಗೆ ಸಿಕ್ಕಿಸಿದ ನನ್ನ ಕ್ಯಾಮೆರಾ ಮುಖವನ್ನು ಆ ದಿಕ್ಕಿಗಿಟ್ಟು ಫೋಕಸ್ ಮಾಡಿದ ರಂಟೂ ಸಾಹು, 'ಇಲ್ಲೇ ನೋಡುತ್ತಿರಿ ಬರುತ್ತೆ' ಎಂದ. ಗೂಡಿನ ನೇರ ಮುಖ ಕಾಣುತ್ತಿರಲಿಲ್ಲ. ಅದು ನಮ್ಮ ವಿರುದ್ಧ ದಿಕ್ಕಿನಲ್ಲಿತ್ತು. ಡಾರ್ಜಲಿಂಗ್ ಮರಕುಟಿಕಗಳು ಅಲ್ಲೇ ತಮ್ಮ ಗೂಡು ಕೊರೆದಿದ್ದವು.

ಆಗ ಪ್ರವೀಣ, 'ಗೂಡಲ್ಲಿ ಮರಿ ಇದ್ದಾವೆ. ಹಕ್ಕಿ ಹತ್ತು ನಿಮಿಷಕ್ಕೆ ಒಂದು ಸಲವಾದ್ರೂ ಗುಕ್ಕು ತಂದು ಕೊಡ್ತಾನೆ ಇರುತ್ತೆ. ಬೆಳಗಿನ ಹೊತ್ತಲ್ಲಿ ಪುರುಸೊತ್ತು ಕೊಡದೆ ಫೀಡಿಂಗ್ ತಿನಿಸಿ ಮಧ್ಯಾಹ್ನ ರೆಸ್ಟ್ ಮಾಡ್ತಾವೆ. ಈ ದಾರೀಲಿ ಹೋಗೋ ಕಿಡಿಗೇಡಿಗಳು ಇವಕ್ಕೆ ತೊಂದರೆ ಕೊಟ್ಟಾರೆಂದು ಅರಣ್ಯ ಇಲಾಖೆಯವರಿಗೆ ಹೇಳಿ ಮರೆಗೆ ಹಸಿರು ಪರದೆ ಕಟ್ಟಿಸಿದ್ದೇವೆ. ಇಲ್ಲಿ ಯಾರೂ ಬಂದು ನಿಲ್ಲಬೇಡಿ ಎಂದು ಇಂಗ್ಲಿಷ್ ಭಾಷೆಯಲ್ಲಿ ಬೋರ್ಡ್ ಕೂಡ ಅಂಟಿಸಿ ಆಗಿದೆ. ಇದೆಲ್ಲಾ ವ್ಯವಸ್ಥೆ ಇಲಾಖೆಗೆ ಹೇಳಿಸಿ ನಾನೇ ಮಾಡಿಸಿದ್ದು ಸರ್. ಆದರೆ ವಿಚಿತ್ರ ಎಂದರೆ ಇಲ್ಲಿನ ಜನ ಇದಕ್ಕೆ ತಾರೀಪು ಮಾಡೋದು ಬಿಟ್ಟು ನನ್ನ ದ್ವೇಷ ಮಾಡ್ತಾರೆ. ಇಲಾಖೆಯ ಗುಪ್ತ ಏಜೆಂಟ್ ನೀನು ಎಂದು ಜರೀತಾರೆ.'

'ನೋಡಿ, ಶುರುವಲ್ಲಿ ಖುಲ್ಲಾ ಇದ್ದಾಗ ಒಬ್ಬ ಅಯೋಗ್ಯ ಸಿಗರೇಟು ಸೇದುತ್ತಾ, ಕ್ಯಾಕರಿಸಿ ಕೆಮ್ಮುತ್ತಾ, ಕ್ಯಾಮೆರಾ ಹಿಡಿದು ಆ ಗೂಡಿನ ಹತ್ರಾನೆ ನಿಂತ್ಕೊಂಡು ದಿನಗಟ್ಟಲೆ ಪಟ ತೆಗೆಯುತ್ತಿದ್ದ. ಹೀಗೆಲ್ಲಾ ಮಂಗಾಟ ಮಾಡಿದ್ರೆ ಪಾಪ ಪಕ್ಷಿಗಳಿಗೆ ತೊಂದ್ರೆಯಾಗುತ್ತೆ ಅನ್ನೋ ಕನಿಷ್ಠ ಕಾಮನ್ ಸೆನ್ಸ್ ಕೂಡ ಅವನಿಗೆ ಇರ್ಲಿಲ್ಲ. ಎಷ್ಟೋ ಸಲ ಟೂರಿಸ್ಟ್‌ಗಳಿಗೆ ಈ ಹಕ್ಕಿ ತೋರ್ಸೋಕೆ ಹುಚ್ಚನ ಥರ ವಾರಗಟ್ಟಲೆ ಅಲೆದಾಡಿದ್ದೀನಿ ಸರ್. ಖಯಾಶ್ ಪಡೋರಿಗೆ ತೋರ್ಸಬೇಕಲ್ಲ. ಆದ್ರೆ ಅದು ಅಷ್ಟು ಈಸಿಯಲ್ಲ. ಬೇಕು ಅಂದಾಗ ಬೇಕಾಗಿದ್ದು ಸಿಗಲ್ಲ. ಈ ಏರು ಇಳಿಜಾರು ಅರಣ್ಯದಲ್ಲಿ ಅಷ್ಟೊಂದು ಸಣ್ಣ ಹಕ್ಕೀನ ಎಲ್ಲೆಲ್ಲೀಂತ ಹುಡುಕೋದು ನೀವೆ ಹೇಳಿ. ಅದರ ಒಂದು ಕೂಗು ಕಿವಿಗೆ ಬಿದ್ರೆ ಅದೇ ನಮ್ ಪುಣ್ಯ. ಈ ಸೂಕ್ಷ್ಮ ಸನ್ನೆ ಗೊತ್ತಿಲ್ಲದಿರೋ ಬಡ್ಡೀಮಕ್ಕಳೆಲ್ಲಾ